# ಎಮೋಜಿ ಎಂಬ ಮೋಹಿನಿಯರು!



ಭಾಷೆಯ ಶೂನ್ಯದೊಳಗೆ ತೂರಿ
ಭಾವನೆಗಳಿಗೆ ಬೆನ್ನ ತೋರಿ
ಎಲ್ಲಕ್ಕೂ ಒಂದೇ ಮಂತ್ರ
ಈ ಸನ್ನೆಗಳು ಮಾತ್ರ!

ಎಲ್ಲವ ಉಸಿರಿದೆಯೆನ್ನುವ ಭಾವದಲಿ
ಇನ್ನೇನೂ ಉಳಿದಿಲ್ಲವೆಂಬ ಭ್ರಮೆಯಲ್ಲಿ
ಹರಿಬಿಟ್ಟ ನಾಲ್ಕಾರು ಎಮೋಜಿಗಳು
ಕಲ್ಪನೆಯ ಕದ ಮುಚ್ಚಿದ ನವ ತಾಂತ್ರಿಕ
ಮೋಹಿನಿಯರು

ಧಾವಂತದ ಜೀವನದಲ್ಲಿ
ವ್ಯವಧಾನ ಮರೆತ ಮನವ ತೃಪ್ತಗೊಳಿಸುವಲ್ಲಿ
ಮೂಡಿದ ಬರಡು ಮೊಹರುಗಳ ಮಧ್ಯೆ
ಮರೆಯಾದವೆ ಸ್ವರಾದಿ ವ್ಯಂಜನಗಳು?

ಅಕ್ಷರಮಾಲೆಯ ಕೊಸರೂ ಕಾಣದಂತೆ
ಪದಗಳ ಪಾದಗಳನ್ನೇ ಪಥದಿಂದಿಳಿಸಿ
ಗೋಲಾಕಾರದ ಮುದ್ರೆಯ ಛಾಪಿಸಿದರೆ
ಮೂಡೀತೆ ಮನದಾಳದ ಛಾಯೆಯ ಪ್ರತಿಬಿಂಬ!

ಚುಟುಕು ಚಿತ್ರಗಳು ಮಾತಿನ ಕಾಂತಿಯ
ಚಿತ್ತದಲ್ಲಿ ಮೂಡಿಸಬಹುದೆ?
ಪದಗಳ ಹೊಳಪಿಲ್ಲದೆ ಬೆಳಗಲಾದೀತೇ
ಬಾಂಧವ್ಯದ ಬೆಸುಗೆಯ!

ಬಿಡದೆ ಕಾಡುವರು ಎಮೋಜಿ ಮೋಹಿನಿಯರು
ಮಾತಿಲ್ಲದೆ ಮಾತುಗಳ ಮರೆಗೆ ಸರಿಸುವರು.

**● ವಿಶ್ವ ದೊಡ್ಡಬಳ್ಳಾಪುರ**

ಕಲೆ: ವಾಗೀಶ ಹೆಗಡೆ

